(ಇ) ವಿಷಯ: ಬಿಜಾಪುರ ಬಾಗಲಕೋಟೆ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ:–

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಅಲಮಟ್ಟಿಯಲ್ಲಿ ಏನು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ, ಇದರಿಂದಾಗಿ ಕಾನೂನು ಪರಿಸ್ಥಿತಿ ಹದಗೆಟ್ಟಿದೆ, ರಸ್ತೆ ತಡೆಯಾಗಿದೆ. ಅಮರಣಾಂತ ಉಪವಾಸ ಮಾಡಿದವರ ಸ್ಥಿತಿ ಗಂಭೀರವಾಗಿದೆ.

(ಗೊಂದಲ)

ಅಧ್ಯಕ್ಷರು: ಅದೆಲ್ಲಾ ಗೊತ್ತಿದೆ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ. ಮಾನ್ಯ ಯಡಿಯೂರಪ್ಪನವರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ತಾವು ದಯಮಾಡಿ ಚರ್ಚೆ ಆರಂಭಮಾಡಬೇಕು. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯಕ್ಕೆ ಸಾಯಂಕಾಲ ಉತ್ತರ ಕೊಡುತ್ತಾರೆ. ನೀರಾವರಿ ಸಚಿವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಉತ್ತರ ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತೇ ಅಲ್ಲಿಗೆ ಹೋಗಿ ಆ ಅಮರಣಾಂತ ಉಪವಾಸವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಬೇಕು. ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು): ಮಧ್ಯಾಹ್ನ ಇದಕ್ಕೆ ಉತ್ತರ ಕೊಡುತ್ತೇನೆ. ನಿನ್ನೆ ಕೂಡ ಆ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ wait ಮಾಡಿದೆ. ಆದರೆ ನನಗೆ ಅವಕಾಶ ಸಿಗಲಿಲ್ಲ. ಏಕೆಂದರೆ, ಅಲ್ಲಿ ಪ್ರಶ್ನೆಗಳೇ ಸುಮಾರು 11 ಇತ್ತು ಮತ್ತು ನಿಯಮ 330ರಡಿಯಲ್ಲಿ 3 ವಿಷಯಗಳು ಚರ್ಚೆ ಮಾಡುವುದಕ್ಕೆ ಇತ್ತು ಇಲ್ಲೂ ಕೂಡ ಆ ಚರ್ಚೆ ನಡೆದಿತ್ತು. ಅದಕ್ಕೆ ಈ ಮನೆಯಲ್ಲೂ ಕೂಡ ಇವತ್ತು ಮಧ್ಯಾಹ್ನ ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ಟೇಟ್‌ಮೆಂಟ್ ರೆಡಿ ಇದೆ. ಮಧ್ಯಾಹ್ನ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಬೇಕಾದರೆ ಆ ಮೇಲೆ ಸ್ಟೇಟ್‌ಮೆಂಟ್ ಮಾಡಿ. ನಾವು ಒತ್ತಾಯ ಮಾಡುವುದಿಲ್ಲ. ಈಗಿ ಬಿಜಾಪುರದಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದು, ಇದು ನಿಮಗೇನೂ ಗೊತ್ತಿರದ ವಿಷಯವಲ್ಲ. ಆ ಘಟನೆಗಳು ನಡೆಯಬಾರದಾಗಿತ್ತು. ತಾವ್ಯಾರಾದರೂ ಹೋಗಿ ಭರವಸೆ ಕೊಟ್ಟು ಅದನ್ನ ಶಮನ ಮಾಡಬಹುದಾಗಿತ್ತು. ಅದೇನಾದರೂ ಬಗೆಹರಿಸಿ ಅವರು ಬೇಡದನ್ನೇನೂ ಮಾಡುತ್ತಿಲ್ಲ. ಸರ್ಕಾರದಿಂದ ಏನು ಮಾಡಬೇಕೋ ಅದಕ್ಕೆ ಅವರು ಜನಜಾಗೃತಿ ಮಾಡುವುದು ಅವರ ಕರ್ತವ್ಯ ಅದನ್ನು ಅವರು ಮಾಡಿದ್ದಾರೆ. ಆದರೆ ದಯಮಾಡಿ ಅದಕ್ಕೆ ತಾವು ಸ್ಪಂದಿಸಬೇಕು. ಸಮಸ್ಯೆ ಬಗೆಹರಿಸಿ ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಬೇಕು.

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು): ಶ್ರೀ ಯಡಿಯೂರಪ್ಪನವರೆ, ನಮ್ಮ ನೀರಾವರಿ ಸಚಿವರಾದಂಥ ಶ್ರೀ ಖರ್ಗೆಯವರು ಮಧ್ಯಾಹ್ನ ಸ್ಟೇಟ್‌ಮೆಂಟ್ ಮಾಡುತ್ತಾರೆ. ಈಗಾಗಲೇ ಅಲ್ಲಿಗೆ ಉಸ್ತುವಾರಿ ಸಚಿವರನ್ನು ಕಳುಹಿಸಿದ್ದೇವೆ. ಆದರೆ ಈ ತರಹದ ಹಿಂಸಾಚಾರ ನಡೆಯಬಾರದು. 16ನೇ ತಾರೀಕು ಸಭೆ ಕರೆಯುತ್ತೇವೆ, ಎಲ್ಲಾ ಅಧಿಕಾರಿಗಳು ಇರುತ್ತಾರೆ ಬನ್ನಿ ಮಾತನಾಡಿ ಎಂದು ಹೇಳಿದ್ದೇವೆ. ನೀವೂ ಸಹ ಪ್ರತಿಭಟನೆ ಮಾಡಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಅದೃಷ್ಟವಂತರು ಸರ್. ಈಗ ನಿಮಗೆ ಸಿಗುತ್ತಿರುವ co-operation ರಾಜ್ಯದ ಇತಿಹಾಸದಲ್ಲಿ ಯಾವುದೇ ಮುಖ್ಯಮಂತ್ರಿಗಳಿಗೂ ಸಿಕ್ಕಿರಲಿಲ್ಲ. ನೀವು ಅಲ್ಲಿಗೆ ಹೋಗಿ ಬಂದುಬಿಟ್ಟರೆ ಸಮಸ್ಯೆಯೇ ಬಗೆಹರಿಯುತ್ತದೆ.

ಶ್ರೀ ಧರಂಸಿಂಗ್: ಅವರಿಗೆ ಆಗಲೇ ನಾವು ಹೇಳಿದ್ದೆವು. ಅಧಿವೇಶನ ನಡೆಯುತ್ತಿರುವಾಗ ಹೇಗೆ ಹೋಗಲಿ. ನಾವು ಈಗ ಹೋದರೆ ವಾಟಾಳ್ ನಾಗರಾಜ್‌ರವರು ಏಕೆ ಬಂದಿಲ್ಲ ಎಂದು ಕೇಳುತ್ತಾರೆ. ಅಧಿವೇಶನ ನಡೆಯುತ್ತಿರುವಾಗ how can I go, tell me. ಅಧಿವೇಶನ ನಡೆಯುತ್ತಿರುವಾಗ ಇಲ್ಲಿ ಒಂದು ದಿವಸ ಬಿಟ್ಟು ಹೇಗೆ ಹೋಗುವುದಕ್ಕಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ನಿಮಗೆ ಏಕೆ ಇಷ್ಟು ಸಿಟ್ಟು ಬರುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ನೀವು ಸಿಟ್ಟುಗೊಂಡಿರುವುದನ್ನು ಇವತ್ತು ಪ್ರಪ್ರಥಮವಾಗಿ ನೋಡಿರುವಂಥದ್ದು. ಇತಿಹಾಸದಲ್ಲಿ ಈ ಸದನದಲ್ಲಿ ಸುಮಾರು 35 ವರ್ಷಗಳಿಂದ ನಾನು ನಿಮ್ಮನ್ನು ನೋಡುತ್ತಿದ್ದೇನೆ. ಇವತ್ತು ನೀವು ತೆಗೆದುಕೊಂಡಂಥ ನಿರ್ಧಾರಗಳು ಈ ಸಿಟ್ಟು ಇವುಗಳನ್ನು ನಾನು ಯಾವತ್ತೂ ನೋಡಿರಲಿಲ್ಲ. ಹೀಗೆ ಏಕೆ ಸಿಟ್ಟುಗೊಂಡಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಧರಂಸಿಂಗ್: ಸಿಟ್ಟಿಲ್ಲ. ನಿಮ್ಮ ಮೇಲಿನ ಪ್ರೀತಿಯಿಂದ ಹೇಳುತ್ತಿದ್ದೇನೆ. ಶ್ರೀ ವಾಟಾಳ್‌ರು ಮತ್ತು ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ನಾನೇ ಖುದ್ದಾಗಿ ಮೂರ್ನಾಲ್ಕು ಸಲ ಶ್ರೀ ಯತ್ನಾಳ್‌ರವರ ಜೊತೆ ಮಾತನಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಿಮಗೆ ಯಾರದ್ದು ಏನು ತೊಂದರೆಗಳಿವೆಯೋ ನನಗಂತೂ ಗೊತ್ತಿಲ್ಲ. ಸದನದಲ್ಲಿ ಬಂದು ಏನೇನೋ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ. ನಮ್ಮ ಮೇಲೆ ಸಿಟ್ಟು ಮಾಡಿಕೊಳ್ಳಬೇಡಿ. ಏನು ತೊಂದರೆಗಳಿವೆಯೋ ಏನು ಕಥೆಯೋ ಪರಿಹಾರ ಮಾಡಿಸಿಕೊಡಿ ಎಂದು ಹೇಳಿದರೆ ನಾವು ಪರಿಹಾರ ಮಾಡಿಸಿಕೊಡುತ್ತೇವೆ.

ಶ್ರೀ ಧರಂಸಿಂಗ್: ತೊಂದರೆ ಇಲ್ಲವೇ ಇಲ್ಲ. ತೊಂದರೆ ಏನೂ ಇಲ್ಲ. ಅದರ ಬಗ್ಗೆ ನೀವು ಏನೂ ಅನುಮಾನ ಪಡಬೇಕಾಗಿಲ್ಲ. ಎಲ್ಲಾ ಸರಿ ಇದೆ. ಯಾವ ತೊಂದರೆಯೂ ಇಲ್ಲ. ಅದರ ಬಗ್ಗೆ ಬಿಡಿ. ಏನಾಗಿದೆ ಎಂದರೆ ಈಗ ಅವರಿಗೆ ಹೇಳಿ, 16ನೇ ತಾರೀಖು ಕರೆಸುತ್ತೇವೆ. ಈಗ ನೀವೆಲ್ಲಾ ಇಲ್ಲೇ ಬರುತ್ತೀರಿ. ಸ್ಟೇಟ್‌ಮೆಂಟ್ ಕೊಡುತ್ತಾರೆ. ಆಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ: ಈಗ ಸರ್ಕಾರದಿಂದ ಅವರ ಬೇಡಿಕೆ ಈಡೇರಿಸಿದ್ದೇವೆಂದು ಹೇಳಿದರೆ ಮುಗಿದುಹೋಗುತ್ತದೆ.

ಅಧ್ಯಕ್ಷರು: ಮಾನ್ಯ ಕಾರಜೋಳರವರೆ, ಮಧ್ಯಾಹ್ನ ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ.